MVC No.361/2019 PW-1

<u>ದಿನಾಂಕ **12.06.2025** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು ಃ ಎದುರುದಾರರಾದ ಆರ್ **1** ಪರ ಶ್ರೀ ಕೆ ಟಿ ಟಿ ವಕೀಲರಿಂದ ಃ</u>

ಸಾತನೂರು ರಸ್ತೆಯಲ್ಲಿ ವಾಹನ ಸಂದಣಿ ಜಾಸ್ತಿ ಇರುತ್ತದೆ ಎಂದರೆ ಸಾಕ್ಷಿಯು ಅಪಘಾತವಾದ ಸಮಯದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ವಾಹನ ಸಂದಣಿ ಇರುವುದರಿಂದ ಮತ್ತು ರಸ್ತೆ ತಡೆ ಇರುವುದರಿಂದ ಹಾಗೂ ಜನ ಸಂದಣಿ ಇರುವುದರಿಂದ ವಾಹನಗಳು ಅತೀ ವೇಗವಾಗಿ ಸಂಚಾರ ಮಾಡುವುದಿಲ್ಲವೆಂದರೆ ಸಾಕ್ಷಿಯು ಹೋಗಬಹುದು ಎಂದು ನುಡಿಯುತ್ತಾರೆ. ನಾನು ಅತೀ ವೇಗಾವಾಗಿ ಬಂದು ಯೂ ತಿರುವು ಪಡೆಯುವಾಗ ನಾನೇ ಬಿದ್ದಿರುತ್ತೇನೆಂದರೆ ಸುಳ್ಳು. ಅಪಘಾತವಾದ ನಂತರ ನನ್ನನ್ನು ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಚನ್ನಪಟ್ಟಣಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿದ್ದರು. ಅಲ್ಲಿ ಎಂ ಎಲ್ ಸಿ ಆಗಿರುತ್ತದೆ. ಸದರಿ ಆಸ್ಪತ್ರೆಯಲ್ಲಿ ನನಗೆ ಪ್ರಥಮ ಚಿಕಿತ್ಸೆಯನ್ನು ನೀಡಿರುತ್ತಾರೆ. ಸದರಿ ಆಸ್ಪತ್ರೆಯಲ್ಲಿ ನಾನು ಯಾರ ಜೊತೆಗೂ ಮಾತನಾಡಲಿಲ್ಲ.ನಂತರ ಬಿ ಜಿ ಲಿಂಗೇಗೌಡ ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಅಪಘಾತವಾದ ಬಗ್ಗೆ ಸದರಿ ಆಸ್ಪತ್ರೆಯಲ್ಲಿ ತಿಳಿಸಿಲ್ಲ. ಸದರಿ ಆಸ್ಪತ್ರೆಯಲ್ಲಿ ಪೋಲಿಸರು ನನ್ನ ಹೇಳಿಕೇಯನ್ನು ಪಡೆದಿಲ್ಲ. ನನಗೆ ಶಸ್ತ್ರ ಚಿಕಿತ್ಸೆಯಾದ ನಂತರ ನಾನು ಚೆನ್ನಾಗಿರುತ್ತೇನೆ. ಅಪಘಾತವಾದ ದಿನವೇ ಶಸ್ತ್ರ ಚಿಕಿತ್ಸೆಯಾಗಿದೆ. ಇದಾದ ನಂತರ ಠಾಣೆಗೆ ದೂರು ನೀಡಲು ತೊಂದರೆ ಇರಲಿಲ್ಲ ಎಂದರೆ ನಾನು ವಿಶ್ರಾಂತಿ ಪಡೆಯುತ್ತಿದ್ದೆ ಎಂದು ನುಡಿಯುತ್ತಾರೆ. ಅದೇ ರೀತಿ ಈ ಬಗ್ಗೆ ನನ್ನ ತಂದೆ ಠಾಣೆಗೆ ದೂರು ನೀಡಲು ತೊಂದರೆ ಇರಲಿಲ್ಲ ಎಂದರೆ ನಿಜ. ಅಪಘಾತವಾದ 5 ದಿನಗಳ ನಂತರ ನನ್ನ ತಂದೆ ದೂರು ನೀಡಿರುತ್ತಾರೆಂದರೆ ಗೊತ್ತಿಲ್ಲ. ನಾನೇ ಅಪಘಾತ ಮಾಡಿದ್ದರಿಂದ ನನ್ನ ತಂದೆ ದೂರು ನೀಡಿಲ್ಲ ಎಂದರೆ ಸುಳ್ಳು. ಅಪಘಾತವಾದ ನಂತರ ಸ್ಥಳಕ್ಕೆ ಬಂದ 1 ನೇ ಎದುರುದಾರರ ವಿರುದ್ಧ ನಾನು ದೂರು ನೀಡಿರುತ್ತೇನೆಂದರೆ ಸುಳ್ಳು. ಅಪಘಾತವಾದ ದಿನ ನನಗೆ 2 ಶಸ್ತ್ರ ಚಿಕಿತ್ಸೆಗಳು ಆಗಿರುತ್ತದೆ. ನಿಪಿ-7 ರಲ್ಲಿ 2 ಶಸ್ತ್ರ ಚಿಕಿತ್ಸೆಯ ಬಗ್ಗೆ ನಮೂದು ಮಾಡಿರುವ ಬಗ್ಗೆ ಗೊತ್ತಿಲ್ಲ. ನಿಪಿ-8 ರ ಬಿಲ್ಲು ನಂಬರ್

2,9,10 ಇವೆಲ್ಲವೂ ಒಂದೇ ಬಿಲ್ಲಿನ ಸಂಖ್ಯೆಗೆ ಸಂಬಂದಪಟ್ಟಿವೆ ಎಂದರೆ ಸುಳ್ಳು. ನಿಪಿ-8 ರ ಬಿಲ್ಲು ನಂಬರ್ 17,18 ಇವು 1 ವರ್ಷದ ನಂತರದ ಬಿಲ್ಲುಗಳು ಎಂದರೆ ಸುಳ್ಳು. ನಿಪಿ-8 ರ ಬಿಲ್ಲು ನಂಬರ್ 21,22 ಇವುಗಳನ್ನು ಒಂದೇ ದಿನ ನೀಡಿರುತ್ತಾರೆಂದರೆ ನಿಜ. ಇವೆರಡೂ ಬಿಲ್ಲುಗಳಲ್ಲಿ ವೈದ್ಯರ charge ಮತ್ತು ಇತರ ಚಾರ್ಜುಗಳನ್ನು 2 ಬಿಲ್ಲುಗಳಲ್ಲಿ ನಮೂದು ಮಾಡಿದ್ದಾರೆಂದರೆ ಸುಳ್ಳು. ನಿಪಿ-8 ರ ಬಿಲ್ಲು ನಂಬರ್ 21,22 ಅನ್ನು ಸೃಷ್ಟಿ ಮಾಡಿರುತ್ತೇನೆಂದೆ ಸುಳ್ಳು. ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ.ಸಾಕ್ಷಿ ಪ್ರಮಾಣ ಪತ್ರವನ್ನು ಬರೆಸುವಾಗ ನಾನು ಕೆಲಸ ಮಾಡುತ್ತಿರಲಿಲ್ಲ ನಾನು ಅದರಲ್ಲಿ ಖಾಸಗೀ ಕೆಲಸ ಮಾಡುತ್ತಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿಯು ನಾನು ಕೆಲಸ ಮಾಡುತ್ತಿರಲಿಲ್ಲ ಎಂದು ನುಡಿಯತ್ತಾರೆ. ನಾನು ಮೊದಲಿನಂತೆ ಆರೋಗ್ಯವಾಗಿರುತ್ತೇನೆಂದರೆ ಸುಳ್ಳು. ಈಗ ತೊಂದರೆ ಇರುವ ಬಗ್ಗೆ ದಾಖಲೆ ನೀಡಿಲ್ಲ. 1 ನೇ ಎದುರುದಾರರ ಯಾವುದೇ ತಪ್ಪು ಇಲ್ಲ ಎಂದರೆ ಸುಳ್ಳು. ಅಪಘಾತವಾದ ದಿನ ನನಗೆ ಚಾಲನೆ ಪರವಾನಿಗೆ ಇರಲಿಲ್ಲ ಎಂದರೆ ಸಾಕ್ಷಿಯು ಎಲ್ ಎಲ್ ಇತ್ತು ಎಂದು ನುಡಿಯುತ್ತಾರೆ. ನಾನು ಚಾಲನೆಯಲ್ಲಿ ಪರಿಪೂರ್ಣನಾಗಿರಲಿಲ್ಲ ಎಂದರೆ ಸುಳ್ಳು. ಆದ್ದರಿಂದ ನಾನು ಬಿದ್ದು ಗಾಯ ಮಾಡಿಕೊಂಡಿರುತ್ತೇನೆಂದರೆ ಸುಳ್ಳು.

<u>ಮರುವಿಚಾರಣೆ ಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.